19

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 160 ಐಎನ್‌ಎಂ 85

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ -2,
ಬೆಂಗಳೂರು, ದಿನಾಂಕ: 28-10-91.

ಸುತ್ತೋಲೆ

ವಿಷಯ:- ಕರ್ನಾಟಕ (ಪರ್ಸನಲ್ ಮತ್ತು ಮಿಸಲೇನಿಯಸ್) ಇನಾಂ ರದ್ದಿಯಾತಿ ಕಾಯಿದೆ, 1954 ರಡಿ ಬರುವ ಇನಾಂ ಜಮೀನಿನ ಪರಿಹಾರ ಪಾವತಿಸುವ ಬಗ್ಗೆ ಸ್ಪಷ್ಟೀಕರಣ ಕುರಿತು.

ಉಲ್ಲೇಖ:- ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯಿದೆ, 1977ರಡಿ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಆರ್‌ಡಿ 74 ಐಎನ್‌ಎಂ 91, ದಿನಾಂಕ: 22-7-91.

- - -

ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯಿದೆ, 1977ರಡಿ ಬರುವ ಇನಾಂ ಜಮೀನುಗಳು ಸರ್ಕಾರದಲ್ಲಿ ನಿಹಿತಗೊಂಡಾಗ ಸದರಿ ಇನಾಂ ಭೂಮಿಗೆ ಪಾವತಿಸಬೇಕಾದ ಪರಿಹಾರವನ್ನು ಅದೇ ಕಾಯಿದೆಯಡಿಯಲ್ಲೇ ಪಾವತಿಸುವಂತೆ ಉಲ್ಲೇಖದಲ್ಲಿ ನಮೂದಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ ಮತ್ತು ಕರ್ನಾಟಕ ಭೂಸುಧಾರಣಾ ಕಾಯಿದೆ, 1961ರಡಿ ಬರುವ ಅಂದರೆ ಸರ್ಕಾರದಲ್ಲಿ ನಿಹಿತಗೊಂಡ ಜಮೀನುಗಳಿಗೆ ಆ ಕಾಯಿದೆಯ ಅನುಸಾರ ಭೂ ಪರಿಹಾರ ನೀಡಲಾಗುತ್ತಿದೆ.

ಈಗ ಕಾನೂನು ಇಲಾಖೆಯ ಅಭಿಪ್ರಾಯ ಸಂಖ್ಯೆ:ಎಲ್‌ಎಡಿ:ಬ್ರಾಕ್ಯ 1653 ಒಪಿಎನ್-1:88, ದಿನಾಂಕ: 17-7-1991 ರಂತೆ ಕರ್ನಾಟಕ (ಪರ್ಸನಲ್ ಮತ್ತು ಮಿಸಲೇನಿಯಸ್) ಇನಾಂ ರದ್ದಿಯಾತಿ ಕಾಯಿದೆ, 1954ರಡಿ ಬರುವ ಇನಾಂ ಜಮೀನುಗಳಿಗೆ ಅಂದರೆ ಸರ್ಕಾರದಲ್ಲಿ ನಿಹಿತಗೊಂಡ ಜಮೀನುಗಳಿಗೆ ಪರಿಹಾರ ಧನವನ್ನು ಈ ಕಾಯಿದೆಯಂತೆಯೇ ನಿರ್ಧರಿಸಲು ಮತ್ತು ಪಾವತಿಸಲು ಸಂಬಂಧಪಟ್ಟ ಎಲ್ಲಾ ಕಂದಾಯ ಇಲಾಖಾ ಅಧಿಕಾರಿಗಳಿಗೆ ಈ ಮೂಲಕ ಆದೇಶಿಸಲಾಗಿದೆ.

28/10

(ಕೆ.ಬಿ.ತಿಮ್ಮಾರೆಡ್ಡಿ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂಸುಧಾರಣೆ)

ಎಲ್ಲಾ ವಿಭಾಗಾಧಿಕಾರಿಗಳು.
ಎಲ್ಲಾ ಜಿಲ್ಲಾಧಿಕಾರಿಗಳು,
ಎಲ್ಲಾ ಉಪ ವಿಭಾಗಾಧಿಕಾರಿಗಳು, ಎಲ್ಲಾ ತಹಸೀಲ್ದಾರರುಗಳು.
ವಿಶೇಷ ಕೋಶ, ಕಂದಾಯ ಇಲಾಖೆ,
ಶಾಖಾ ರಕ್ಷಾ ಕಡತ,
ಹೆಚ್ಚಿನ ಪ್ರತಿಗಳು.

(ಮಾಹಿತಿ ಮತ್ತು ಸೂಕ್ತ ಪಾಲನೆಗಾಗಿ)

:ನಕಲು: